## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು.

ಸಿ ಸಿ ನಂಃ 1014/2016 ಪಿಡಬ್ಲ್ಯೂಃ 14 ಸಿಡಬ್ಲ್ಯೂಃ 14

---

| | | |
|---|---|---|
| ಸಾಕ್ಷಿಯ ಹೆಸರು | : | ಚಂದ್ರಶೇಖರ್ |
| ತಂದೆ ಹೆಸರು | : | ಶಿವಕುಮಾರ್ |
| ವಯಸ್ಸು | : | 45 ವರ್ಷ |
| ವೃತ್ತಿ | : | ಸಿ ಪಿ ಐ, ಬಿಳಿಕೆರೆ |
| ಸ್ಥಳ | : | ನಂಜನಗೂಡು |

### ಸತ್ಯ ಪ್ರತಿಜ್ಞೆಯ ಮೇರೆಗೆ, ತಾ: 28-04-2026

ದಿಃ 01-03-2016 ರಿಂದ 01-10-2017 ರವರೆಗೆ ಅರೇಹಳ್ಳಿ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 05-04-2016 ರಂದು ಈ ಕೇಸಿನ ಕಡತವನ್ನು ಚಾಸಾ-13 ರವರಿಂದ ಪಡೆದು ಪರಿಶೀಲಿಸಿ, ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 02-11-2016 ರಂದು ಪಿ ಡಿ ಓ ಅನುಘಟ್ಟ ರವರಿಂದ ಬೋರ್ ವೆಲ್ ಗೆ ಬಳಸಿದ ವಿದ್ಯುತ್ ಬಿಲ್ ಹಾಗೂ ಕುಡಿಯುವ ನೀರಿನ ಸರಬರಾಜು, ಅನುಘಟ್ಟ ಗ್ರಾಮದ ಮಾಹಿತಿಯ ನಕಲು ಪ್ರತಿಯನ್ನು ಪಡೆದಿರುತ್ತೇನೆ.

ದಿಃ 15-12-2016 ರಂದು ಚಾಸಾ-1 ರವರು ಕರ್ತವ್ಯಕ್ಕೆ ಹಾಜರಾದ ಬಗ್ಗೆ ದೃಢೀಕರಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನಂತರ ಆರೋಪಿಗಳ ವಿರುದ್ಧ ಅಪರಾಧ ಸಾಬೀತಾದ ಹಿನ್ನಲೆಯಲ್ಲಿ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-10, 11 ಮತ್ತು 12 ರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-10ಬಿ, 11 ಬಿ ಮತ್ತು 12 ಬಿ ಎಂದು ಗುರುತಿಸಲಾಯಿತು. ಬೋರ್ ವೆಲ್ ಗೆ ಬಿಲ್ ಪಾವತಿ ಮಾಡಿದ ಬಗ್ಗೆ ಎರಡು ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-15 ಮತ್ತು 16 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-15ಎ ಮತ್ತು 16ಎ ಎಂದು ಗುರುತಿಸಲಾಯಿತು. ಸ ನಂ.61/1 ರ 2015-16 ರ ಆರ್ ಟಿ ಸಿಯನ್ನು ನಿಪಿ-17 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ವಿ ಎನ್ ವಕೀಲರಿಂದ**

ಸ ನಂ.61/1 ರಲ್ಲಿ ಬೋರ್ ವೆಲ್ ಇತ್ತು ಎಂದು ತೋರಿಸಲು ಯಾವ ದಾಖಲೆಗಳನ್ನು ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಕೊಳವೆ ಬಾವಿ ಇದೆ ಎಂದು ತೋರಿಸಲು ದಾಖಲೆಗಳನ್ನು ಪಡೆದಿರುತ್ತೇನೆ, ಆದರೆ 61/1 ರಲ್ಲಿ ಇದೆ ಎಂದು ತೋರಿಸಲು ದಾಖಲೆ ಪಡೆದಿರುವುದಿಲ್ಲ. ಸ ನಂ.61/1 ರಲ್ಲಿ ಕೊಳವೆ ಬಾವಿ ತೆಗೆಸಲು ಹಣ ಸಂದಾಯವಾದ ಬಗ್ಗೆ ನಾನು ದಾಖಲೆ ಪಡೆದಿರುವುದಿಲ್ಲ. ಕೊಳವೆ ಬಾವಿ ತೆಗೆಸಲು ಅನುಘಟ್ಟ ಗ್ರಾಮ ಪಂಚಾಯ್ತಿಯವರು ಸ ನಂ.61/1 ರ ಮಾಲೀಕರಿಂದ ಅನುಮತಿ ಪಡೆದಿದ್ದಾರಾ ಎಂದರೆ ಸಾಕ್ಷಿಯು ಮೌಖಿಕವಾಗಿ ಪಡೆದಿರುತ್ತಾರೆ ಲಿಖಿತವಾಗಿ ಪಡೆದಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಮೌಖಿಕವಾಗಿ ಅನುಮತಿ ನೀಡಿರುತ್ತಾರೆ ಎಂದು ದೋಷಾರೋಪಣಾ ಪಟ್ಟಿಯಲ್ಲಿ ನಮೂದು ಮಾಡಿರುವುದಿಲ್ಲ. ಅನುಘಟ್ಟ ಗ್ರಾಮ ಪಂಚಾಯ್ತಿಯಲ್ಲಿ ಒಟ್ಟು ಎಷ್ಟು ಕೊಳವೆ ಬಾವಿ ಇದೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ-15 ರಲ್ಲಿ ಸ ನಂ.61/1 ರ ಕೊಳವೆ ಬಾವಿಗೆ ಸಂಬಂಧಪಟ್ಟಿದ್ದು ಎಂದು ಬರೆದಿರುವುದಿಲ್ಲ ಎಂದರೆ ಸರಿ. ನಿಪಿ-16 ರಲ್ಲಿ ಯಾವ ಕಾರಣಕ್ಕೆ ಹಣ ಸಂದಾಯ ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬೀದಿ ದೀಪ ಮತ್ತು ಕುಡಿಯುವ ನೀರಿನ ಸರಬರಾಜಿಗೆ ಸಂದಾಯವಾಗಿರುತ್ತದೆ ಎಂದು ಉತ್ತರಿಸುತ್ತಾರೆ. ನಿಪಿ-16 ರಲ್ಲಿ ಇದೇ ವಿಷಯಕ್ಕೆ ಸಂದಾಯ ಆಗಿದೆ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ಚೆಕ್ ನಲ್ಲಿ ಬರೆಯುವುದಿಲ್ಲ ಎಂದು ಉತ್ತರಿಸುತ್ತಾರೆ. ಸನಂ.61/1 ರಲ್ಲಿರುವ ಕೊಳವೆ ಬಾವಿಗೆ ವಿದ್ಯುತ್

ಬಿಲ್ ಕಟ್ಟಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಪಡೆದಿಲ್ಲ ಎಂದರೆ ಸರಿ. ನಿಪಿ–17 ರ ಕಾಲಂ ನಂಃ 5 ರಲ್ಲಿ ಕೊಳವೆ ಬಾವಿ ಇದೆ ಎಂದು ನಮೂದು ಇಲ್ಲ ಎಂದರೆ ಸರಿ.

ನಿಪಿ–1 ರಲ್ಲಿ ಕಾಲಂ 10 ರಲ್ಲಿ ರಸ್ತೆಯ ನಂತರ ನಾಗರತ್ನಮ್ಮನವರಿಗೆ ಸೇರಿದ ತೋಟ ಎಂದು ಬರೆದಿರುತ್ತೇನೆ ಎಂದರೆ ಸರಿ. ನಾಗರತ್ನಮ್ಮನವರಿಗೆ ಸೇರಿದ ಕೊಳವೆ ಬಾವಿಗೆ ನಾನು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನನ್ನ ಮುಂದೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಅಂಕಿ ಅಂಶಕ್ಕೋಸ್ಕರ ಜಿಲ್ಲಾ ಪಂಚಾಯ್ತಿಯವರ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಎಲ್ಲ ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಸೂಕ್ತ ತನಿಖೆ ಮಾಡದೇ ಅರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಅದೆ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**